**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕಃ 21-08-2019

**<u>ಮುಖ್ಯ ವಿಚಾರಣೆಃ</u>**- ಶ್ರೀ ಸಿ.ಪಿ.ಪಿ ವಾದಿಯ ಪರ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತದೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿದಾರರನ್ನು ಪಿ.ಡಬ್ಲ್ಯೂ-1 ಎಂದು ಪರಿಗಣಿಸಲಾಯಿತು.

ವಂಶವೃಕ್ಷ ಹಾಜರುಮಾಡಿದ್ದು ಅದನ್ನು ನಿಪಿ-1 ಎಂದು, ದಿಃ 21-1-1994 ರಂದು ನಮ್ಮ ತಂದೆ ಬರೆದುಕೊಟ್ಟ ನೋಂದಾಣಿ ವಿಲ್‌ನ ದೃಢೀಕೃತ ಪ್ರತಿ ಹಾಜರುಮಾಡಿದ್ದು ಅಸಲು ಪ್ರತಿ ಪ್ರತಿವಾದಿಯ ಹತ್ತಿರ ಇದೆ. ಸದರಿ ದೃಢೀಕೃತ ಪ್ರತಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ಪ್ರತಿವಾದಿಯರಿಗೆ ನೀಡಿದ ನೋಟೀಸಿನ ಕಚೇರಿ ಪ್ರತಿ ಹಾಜರುಮಾಡಿದ್ದು ಅದನ್ನು ನಿಪಿ-3 ಎಂದು, 2 ಅಂಚೆ ರಶೀದಿ ಹಾಜರುಮಾಡಿದ್ದು ಅವುಗಳನ್ನು ನಿಪಿ-4 ಮತ್ತು 5 ಎಂದು, ನಮ್ಮ ತಂದೆಯ ಮರಣ ಪ್ರಮಾಣ ಪತ್ರ ಹಾಜರುಮಾಡಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.</u>**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

2 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ